# ಕಿರುತೆರೆಗೆ 25

## ಅಪರ್ಣಾ, ಸಿಹಿಕಹಿ ಚಂದ್ರು, ಮೂರ್ತಿಗೆ ಪ್ರಶಸ್ತಿ



ಅರಮನೆ ಮೈದಾನದಲ್ಲಿ ನಡೆದ ಟೆಲಿ ಅವಾರ್ಡ್ಸ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಿರುತೆರೆ ಕಲಾವಿದೆಯರ ಸಂಭ್ರಮ.

**ಬೆಂಗಳೂರು:** ಕಿರುತೆರೆ ಕಲಾವಿದೆ, ನಿರೂಪಕಿ ಅಪರ್ಣಾ, ಸಿಹಿಕಹಿ ಚಂದ್ರು, ಎಂ.ಎಸ್. ನರಸಿಂಹ ಮೂರ್ತಿ ಆ್ಯಕ್ಟ್ ಟೆಲಿವಿಷನ್‌ನ 'ಟೆಲಿ ಅವಾರ್ಡ್ಸ್'ಗೆ ಪಾತ್ರರಾಗಿದ್ದಾರೆ.

ಕನ್ನಡ ಟೆಲಿವಿಷನ್‌ಗೆ ಪ್ರತ್ಯೇಕವಾದ ಮೊತ್ತಮೊದಲ ಪ್ರಶಸ್ತಿಯನ್ನು ಭಾನುವಾರ ನಡೆದ ವರ್ಣರಂಜಿತ ಸಮಾರಂಭದಲ್ಲಿ ವಿತರಿಸಲಾಯಿತು.

ಕಿರುತೆರೆಗೆ 25 ವರ್ಷ ತುಂಬಿದ ಸಂದರ್ಭದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಿರುತೆರೆಯ ಸಾಧಕರನ್ನು ಸನ್ಮಾನಿಸಲಾಯಿತು. ಪ್ರಸಾರ ಹಾಗೂ ನಿರ್ಮಾಣ ಕ್ಷೇತ್ರದಲ್ಲಿ ಸಲ್ಲಿಸಿರುವ ಅನುಪಮ ಸೇವೆಗಾಗಿ ಸುರೇಂದ್ರನಾಥ್, ವಿಜಯಕುಮಾರ್, ಅನಿಲ್ ಶೆಟ್ಟಿ ಹಾಗೂ ಆಳ್ವ ಮೆಡಿಟೆಕ್‌ನ ಎನ್. ಆಳ್ವ ಅವರಿಗೆ ವಿಧಾನಸಭಾಧ್ಯಕ್ಷ ಜಗದೀಶ್ ಶೆಟ್ಟರ್ ಪ್ರಶಸ್ತಿ ನೀಡಿ ಗೌರವಿಸಿದರು.

ಎಂ.ಎಸ್. ನರಸಿಂಹ ಮೂರ್ತಿ ಶ್ರೇಷ್ಠ ಸಂಭಾಷಣೆಗಾರ ಮತ್ತು ಎಸ್. ಬಾಲರಾಜ್ ಶ್ರೇಷ್ಠ ಸಂಕಲನಕಾರ ಪ್ರಶಸ್ತಿಯನ್ನು ನಿರ್ಮಾಪಕ ಕೆ.ಸಿ.ಎನ್. ಚಂದ್ರು ಅವರಿಂದ ಸ್ವೀಕರಿಸಿದರೆ, ಹೇಮಾ ಚೌಧರಿ ಶ್ರೇಷ್ಠ ಛಾಯಾಗ್ರಾಹಕ ಪ್ರಶಸ್ತಿಯನ್ನು ಸಿ.ಡಿ. ರಾಜು ಅವರಿಗೆ ಹಾಗೂ ಪ್ರಿಯಾಂಕ ಉಪೇಂದ್ರ ಶ್ರೇಷ್ಠ ವಸ್ತ್ರವಿನ್ಯಾಸ ಪ್ರಶಸ್ತಿಯನ್ನು ವೀರೇಂದ್ರ ಅವರಿಗೆ ಪ್ರದಾನ ಮಾಡಿದರು. ನಿರ್ಮಾಪಕ ಚಿನ್ನೇಗೌಡ ಶ್ರೇಷ್ಠ ಪ್ರಸಾಧನ ಪ್ರಶಸ್ತಿಯನ್ನು ಡೇನಿಯಲ್ ಅವರಿಗೆ ಹಾಗೂ ಶ್ರೇಷ್ಠ ನಿರ್ಮಾಣ ಸಂಸ್ಥೆ ಪ್ರಶಸ್ತಿಯನ್ನು ಮೀಡಿಯಾ ಹೌಸ್‌ಗೆ ನೀಡಿ ಗೌರವಿಸಿದರು.

ಕೇಬಲ್ ಟೆಲಿವಿಷನ್ ಮತ್ತು ಪ್ರಸಾರ ಮಾಧ್ಯಮದಲ್ಲಿ ಸೇವೆ ಸಲ್ಲಿಸಿ ಕೊಡುಗೆ ನೀಡಿರುವವರನ್ನು ಗೌರವಿಸಲು ರಚಿಸಿದ್ದ ಪ್ರಶಸ್ತಿಗಳ ತೀರ್ಪುಗಾರರ ಸಮಿತಿಯಲ್ಲಿ ಕವಿ ದೊಡ್ಡರಂಗೇಗೌಡ, ಅನಂತ ಚಿನಿವಾರ್, ಸಬ್ಬಕೆರೆ ವೆಂಕಟೇಶ್ ಇದ್ದರು. ಸಂಗೀತ ನಿರ್ದೇಶಕ, ಗಾಯಕ ರಘು ದೀಕ್ಷಿತ್, ನಟ ರಾಮಕೃಷ್ಣ ಸೇರಿದಂತೆ ಅನೇಕ ಕಲಾವಿದರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.